**ಓ.ಎಸ್. ನಂಃ 458/2023**

**ಪಿ.ಡಬ್ಲ್ಯೂಃ 1**

**ದಿನಾಂಕ 02.04.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಸಿ.ಎಲ್.ಎಂ. ವಕೀಲರಿಂದಃ**

7. ದಾವಾ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ಮಾರಾಟಗಾರರಾದ ಪುಟ್ಟಸ್ವಾಮಿಗೌಡ ಅಥವಾ ಸುರೇಶರವರ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇತ್ತೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಈಗ ಜಂಜರ್ ನಂ.112 ಹಾಗೂ ಸ್ವತ್ತಿನ ನಂ.103 ರ 2008-09 ನೇ ಸಾಲಿನ ಡಿಮಾಂಡ್ ರಿಜಿಸ್ಟರ್ ದೃಢಿಕೃತ ನಕಲನ್ನು ತೋರಿಸಿ, ದಾವಾ ಆಸ್ತಿಯು ಮೊದಲು ಗಂಗಮ್ಮ ಹಾಗೂ ದೀಪಕ್ ಬಿನ್ ಕೆಂಪೇಗೌಡರ ಹೆಸರಿನಲ್ಲಿತ್ತು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದು ಸೃಷ್ಟಿ ಮಾಡಿದ ದಾಖಲೆ ಎಂದು ನುಡಿದಿರುತ್ತಾರೆ. ನಿಡಿ.1 ರ ದಾಖಲೆ ಮತ್ತು ಈಗ ತೋರಿಸಿದ 2008-09 ನೇ ಸಾಲಿನ ಡಿಮಾಂಡ್ ರಿಜಿಸ್ಟರ್ ನ ದೃಢಿಕೃತ ನಕಲು ಇವೆರಡು ಜಂಜರ್ ನಂ.112 ಹಾಗೂ ಸ್ವತ್ತಿನ ನಂ.103 ರ ಆಸ್ತಿಗೆ ಸಂಬಂಧಪಟ್ಟ ದಾಖಲೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದು ಸೃಷ್ಟಿ ಮಾಡಿದ ದಾಖಲೆ ಎಂದು ನುಡಿದಿರುತ್ತಾರೆ.

8. ದಾವಾ ಆಸ್ತಿಯು 2011 ರ ಪೂರ್ವದಲ್ಲಿ ಗಂಗಮ್ಮ ಹಾಗೂ ದೀಪಕ್ ಬಿನ್ ಕೆಂಪೇಗೌಡರ ಹೆಸರಿನಲ್ಲಿದ್ದ ಕಾರಣ ನಾನು 2011 ರ ಪೂರ್ವದ ದಾವಾ ಆಸ್ತಿಯ ದಾಖಲೆಗಳನ್ನು ನೋಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ನಾನು 2011 ರ ಪೂರ್ವದ ದಾವಾ ಆಸ್ತಿಯ ಪಂಚಾಯಿತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

9. ನಿಪಿ.2 ಮತ್ತು 18 ರ ದಾಖಲೆಗಳು ಮೂರು ತಿಂಗಳ ಅವಧಿಯ ಮಧ್ಯದಲ್ಲಿ ಆಗಿರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಪಂಚಾಯಿತಿ ದಾಖಲೆಗಳು ಎಂದಿಗೂ ಸಹ ಪುಟ್ಟಸ್ವಾಮಿಗೌಡ ಮತ್ತು ಸುರೇಶರವರ ಹೆಸರಿನಲ್ಲಿರದ ಕಾರಣ ನಾನು ದಾವಾ ಆಸ್ತಿಯ ಪಂಚಾಯಿತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

10. ನಿಪಿ.17 ರ ದಾಖಲೆಯನ್ನು ನಾವು ದಾವಾ ಆಸ್ತಿಯನ್ನು ಖರೀದಿಸುವಾಗ ಕೆ.ಸುರೇಶರವರಿಂದ ಪಡೆದಿರುತ್ತೇವೆ. ನಿಪಿ.17 ರ ಮೂಲ ದಾಖಲೆಯನ್ನು ನಾವು

ಸುರೇಶರವರಿಂದ ಪಡೆದಿದ್ದು, ಸದರಿ ಮೂಲ ದಾಖಲೆ ಕಳೆದು ಹೋಗಿರುವ ಕಾರಣ ನಾವು ನಿಪಿ.17 ರ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಿಪಿ.17 ರ ಮೂಲ ದಾಖಲೆ ಕಳೆದು ಹೋಗಿದೆ ಎಂದು ನಾವು ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ.

11. 2011 ರ ಪೂರ್ವದಲ್ಲಿಯೇ ದಾವಾ ಆಸ್ತಿಯನ್ನು ದೀಪಕ್ ಬಿನ್ ಕೆಂಪೇಗೌಡರವರು ಗಂಗಮ್ಮರವರಿಂದ ಖರೀದಿಸಿದ್ದು, ನಂತರದಲ್ಲಿ ದಾವಾ ಆಸ್ತಿಯ ಪಂಚಾಯಿತಿ ದಾಖಲೆಗಳು ಸಹ ಗಂಗಮ್ಮರವರ ಹೆಸರಿನಿಂದ ದೀಪಕ್ ರವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ದೀಪಕ್‌ರವರು ಖರೀದಿಸಿದ ನಂತರದಲ್ಲಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ದಾನ ಪತ್ರದ ಮೂಲಕ ದಿನಾಂಕ 02.07.2009 ರಂದು ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನಪತ್ರದಡಿಯಲ್ಲಿ ದಾವಾ ಆಸ್ತಿಯ ಹಕ್ಕು ಮತ್ತು ಸ್ವಾಧೀನ ಪ್ರತಿವಾದಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ ನಾವು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಮೋಸದಿಂದ ದಾವಾ ಆಸ್ತಿಯ ಪಂಚಾಯಿತಿ ದಾಖಲೆಗಳಲ್ಲಿ ವಾದಿಯ ಹೆಸರನ್ನು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

12. ದಾವಾ ಆಸ್ತಿಯ ಮಾರಾಟಗಾರರಾದ ಪುಟ್ಟಸ್ವಾಮಿಗೌಡ ಮತ್ತು ಸುರೇಶರವರು ಎಂದಿಗೂ ಸಹ ದಾವಾ ಆಸ್ತಿಯ ಮಾಲೀಕರಾಗಿರಲಿಲ್ಲ ಮತ್ತು ಸ್ವಾಧೀನದಲ್ಲಿ ಇರಲಿಲ್ಲ ಆದ್ದರಿಂದ ದಾವಾ ಆಸ್ತಿಯ ಮಾಲೀಕತ್ವ ಮತ್ತು ಸ್ವಾಧೀನ ವಾದಿಗೆ ಎಂದಿಗೂ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕರಾಗಿದ್ದು, ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ಮಾಲೀಕಳು ಅಲ್ಲ ಹಾಗೂ ವಾದಿಯು ಎಂದಿಗೂ ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**